ಗೌರೀಪುರಕ್ಕೆ ಮರಳಿದ್ದೆ.

ನೌಕರಿ...

ದಿನ ಉರುಳುತ್ತಿದ್ದವು.

ಒಂದು ಮಧ್ಯಾಹ್ನ. ಆಫೀಸ್‌ನಿಂದ ಊಟಕ್ಕೆಂದು ಮನೆಗೆ ಬಂದಿದ್ದೆ.

ಬಾತ್‌ರೂಮ್‌ಗೆ ಹೋಗಿ ಕೈಕಾಲು ತೊಳೆದು ಇನ್ನೇನು ಊಟಕ್ಕೆ ಕುಳಿತುಕೊಳ್ಳಬೇಕು: ಚಿಕ್ಕಪ್ಪ, ಚಿಕ್ಕಮ್ಮ ಮತ್ತು ಅವರ ಮಗಳು ನನ್ನ ತಂಗಿ ಮಂಗಲಾ ಮನೆಯಲ್ಲಿ ಹಾಜರ್.

ಊಟ ಮುಗಿಸಿ ಆಫೀಸ್‌ಗೆ ಹೋಗುವ ತರಾತುರಿಯಲ್ಲಿದ್ದೆ. ಅವರ ಬರುವಿನ ಬಗ್ಗೆ ಹೆಚ್ಚೇನೂ ಕೇಳಲು ಅವಕಾಶ ಇರಲಿಲ್ಲ. 'ಊಟ ಮಾಡಿ ವಿಶ್ರಾಂತಿ ತೆಗೆದುಕೊಳ್ಳಿ. ಸಂಜೆ ಮಾತನ್ನಾಡೋಣ' ಎಂದು ಹೊರಟೆ.

ನಡೆದ ವಿಷಯವನ್ನು ಸಂಜೆ ಅವರು ವಿವರಿಸಿದರು:

ಉಂಡಾಡಿಗುಂಡರಾಗಿದ್ದ ಚಿಕ್ಕಮ್ಮ ಚಿಕ್ಕಪ್ಪನ ಮಕ್ಕಳು ಆಸ್ತಿಯ ಪಾಲುಹಿಸ್ಸೆಗೆ ಪೀಡಿಸಲು ಆರಂಭಿಸಿದ್ದರಂತೆ. ಇರೋ ಆಸ್ತಿಯನ್ನು ಮಕ್ಕಳಿಗೆ ಪಾಲು ಮಾಡಿಕೊಟ್ಟರೆ ತಾವು ಬೀದಿಯಲ್ಲಿ ಬಿದ್ದಂತೆಯೇ. ಪಡೆದ ಆಸ್ತಿಯನ್ನು ಈ ಮಕ್ಕಳೂ ಊರ್ಜಿತಗೊಳಿಸೋದಿಲ್ಲ. ಹಾಳುಗೆಡವುತ್ತಾರೆ ಎನ್ನಿಸಿತು ಚಿಕ್ಕಮ್ಮನಿಗೆ. ಅಲ್ಲದೆ ಮದುವೆ ವಯಸ್ಸಿಗೆ ಬಂದಿರುವ ಮಗಳಿದ್ದಾಳೆ. ಅವಳಿಗೆ ಮದುವೆ ಮಾಡಬೇಕು. ಮಕ್ಕಳಿಗೆ ತಿಳಿ ಹೇಳಲು ಪ್ರಯತ್ನಿಸಿದರಂತೆ ಚಿಕ್ಕಮ್ಮ ಚಿಕ್ಕಪ್ಪ. 'ಅವಳಿಗೆ ಮದುವೆ ಆಗುತ್ತೆ; ಅದನ್ನು ಕಾದುಕೊಂಡು ಇರೋದಕ್ಕೆ ನಮ್ಮಿಂದ ಸಾಧ್ಯವಿಲ್ಲ. ನಮ್ಮ ಪಾಲು ನಮಗೆ ಕೊಟ್ಟುಬಿಡಿ' ಎಂದು ದುಂಬಾಲು ಬಿದ್ದರಂತೆ ಚಿಕ್ಕಮ್ಮ ಚಿಕ್ಕಪ್ಪನ ಮಕ್ಕಳು. 'ಆಯಿತು... ಕೊಡೋಣ. ಮೊದಲು ಒಂದು ಮಾತನ್ನು ಗೌರೀಪುರದಲ್ಲಿರೋ ನಿಮ್ಮ ಅಣ್ಣನನ್ನೂ ಕೇಳಬೇಕು. ಅವನಿಗೂ ಆಸ್ತಿಯಲ್ಲಿ ಪಾಲಿದೆಯಲ್ಲಾ' ಎಂದನಂತೆ ಚಿಕ್ಕಪ್ಪ. 'ಆಸ್ತಿಯಲ್ಲಿ ಅವನಿಗೇನು ಪಾಲು ಕೊಡೋದು? ಅವನಿಗೇಕೆ ಪಾಲು ಕೊಡಬೇಕು? ಅವನು ಸರ್ಕಾರಿ ನೌಕರಿಯಲ್ಲಿ ಇರೋವ್ನು. ಸರ್ಕಾರಿ ನೌಕರಿಯಲ್ಲಿ ಇರೋವ್ರು ಪಾಲು ತೆಗೆದುಕೊಳ್ಳುವಂತಿಲ್ಲ' ಎಂದರಂತೆ ಚಿಕ್ಕಪ್ಪನ ಮಕ್ಕಳು.

ಆಸ್ತಿಯಲ್ಲಿ ಪಾಲು ಪಡೆಯಲು ದಿನದಿನಕ್ಕೂ ಆ ಮಕ್ಕಳಿಂದ ಒತ್ತಾಯ ಹೆಚ್ಚಿತು. ಮಕ್ಕಳ ವರಾತದಿಂದ ರೋಸಿಹೋದ ಚಿಕ್ಕಪ್ಪ 'ಪಾಲೂ ಕೊಡೋದಿಲ್ಲ ಏನೂ ಇಲ್ಲಾ. ಅದೇನು ಹರಕೊಳ್ತೀರೋ ಹರ್ಕೊಳ್ಳಿ' ಎಂದುಬಿಟ್ಟನಂತೆ ಒಂದು ದಿನ.

'ಇವೊತ್ತು ಬೆಳಿಗ್ಗೆ ನಮ್ಮನ್ನು ಮನೆಯಿಂದ ಹೊರಹಾಕಿದರು. ಬರೀ ಹೊರ ಹಾಕಿದ್ದು ಮಾತ್ರವಲ್ಲ, ಅಪ್ಪ ಅಮ್ಮ ಎಂದು ನೋಡದೆ ನಮಗೆ ಬಡಿದರು. ಈ ನಿನ್ನ ತಂಗಿಯ ಜಡೆ ಎಳೆದು ಅನಾಮತ್ತಾಗಿ ಮನೆಯಿಂದ ಹೊರ ದಬ್ಬಿದರು. ಬೇರೆ ದಾರಿ ಕಾಣದೆ ನಿನ್ನ ಬಳಿ ಬಂದೆವು; ಬರಬೇಕಾಯಿತು' ಎಂದರು ಚಿಕ್ಕಮ್ಮ ಚಿಕ್ಕಪ್ಪ.

ನನಗೆ ಥಟ್ಟನೆ ನೆನಪಾದದ್ದು ವಳಗೆರೆ ಭಾಸ್ಕರರಾಯರು; ಚಿಕ್ಕಮ್ಮನ ಕಷ್ಟಗಳಿಗೆ ಒದಗುತ್ತಿದ್ದ ಆಪದ್ಬಾಂಧವ. ಅದನ್ನೇ ಹೇಳಿದೆ: 'ವಳಗೆರೆಯ ಆ ಭಾಸ್ಕರರಾಯರ ಬಳಿ ಹೋಗಿ ಹೇಳಬೇಕಾಗಿತ್ತು ಈ ವಿಷಯವನ್ನು. ಅವರು ಪರಿಹಾರ ಸೂಚಿಸುತ್ತಿದ್ದರು. ಅದೂ ಚಿಕ್ಕಮ್ಮನ ಬಗ್ಗೆ ವಿಶೇಷ ಕಕ್ಕುಲಾತಿ ಹೊಂದಿರುವವರು ಅವರು. ಚಿಕ್ಕಮ್ಮ ಹೋಗಿ ಕೇಳಿದ್ದರೆ ಒಂದಲ್ಲಾ ಒಂದು ಬಗೆಯಲ್ಲಿ ಪರಿಹಾರ ಸೂಚಿಸುತ್ತಿದ್ದರು.'

ಚಿಕ್ಕಮ್ಮ ಹೇಳಿದಳು: 'ನಾನು ಅದನ್ನೇ ಹೇಳಿದೆ;ಗೋಗರದೆ. ಆದರೆ ಈ ನಿನ್ನ ಚಿಕ್ಕಪ್ಪ, ನಿನ್ನ ತಂಗಿ ಈ ಮಂಗಲಾ ಅಲ್ಲಿಗೆ ಹೋಗಲು ನನಗೆ ಬಿಡಲೇ ಇಲ್ಲ.'

ಅಲಾಯ್ದದಲ್ಲಿ ಚಿಕ್ಕಮ್ಮ ನನ್ನ ಬಳಿ ಹೇಳಿದಳು: 'ನೀನು ಆಗ ಹೇಳಿದಂತೆ ನಮಗೆ ಬಂದಿರೋ